# ವಿಶ್ವ ಸಂವಿಧಾನದ ಮೂಲ ಲಕ್ಷಣಗಳು

**ವಿಶ್ವ ಸಂವಿಧಾನ ಮತ್ತು ಸಂಸತ್ ಸಂಘ**
#107/1, ಎಂ.ಕೆ.ಸಿ.ಎಸ್ ಕಟ್ಟಡ, ಮೌಂಟ್ ಜಾಯ್ ವಿಸ್ತರಣ, ಹನುಮಂತನಗರ,
ಬೆಂಗಳೂರು-560019

**ಮಿಂಚಂಚೆ:** Secretariat@wcpa.world

## ವಿಶ್ವ ಒಕ್ಕೂಟದ ಸಂವಿಧಾನ ಮೂಲ ಲಕ್ಷಣಗಳು

**1. ಭೂ ಒಕ್ಕೂಟದ ವಿಶಾಲ ಕಾರ್ಯಗಳು:**

• ಯುದ್ಧವನ್ನು ತಡೆಯುವುದು;
•ಸಾಮೂಹಿಕ ವಿನಾಶದ ಆಯುಧಗಳ ನಿರ್ಮೂಲನ;
• ಸಾರ್ವತ್ರಿಕ ಮಾನವ ಹಕ್ಕುಗಳ ರಕ್ಷಣೆ;
• ಬಡತನದ ಅಂತ್ಯ;
• ಅಂತರರಾಷ್ಟ್ರೀಯ ಪ್ರಕ್ರಿಯೆಗಳ ನಿಯಂತ್ರಣೆ;
•ಜೀವಗೋಳ (ಬಯೋಸ್ಫಿಯರ್)ನ ರಕ್ಷಣೆ; ಮತ್ತು
• ರಾಷ್ಟ್ರಗಳ ಸಾಮರ್ಥ್ಯವನ್ನು ಮೀರಿದ ವಿಶ್ವ ಸಮಸ್ಯೆಗಳ ಪರಿಹಾರ.

**2. ಭೂ ಒಕ್ಕೂಟದ ಮೂಲ ರಚನೆ:**

•ವಿಶ್ವದ ಎಲ್ಲಾ ಜನರು ಮತ್ತು ಎಲ್ಲಾ ರಾಷ್ಟ್ರಗಳನ್ನು ಒಳಗೊಂಡ ಸಾರ್ವತ್ರಿಕ ಒಕ್ಕೂಟವಾಗಿ ಸಂಘಟನೆ;
•ಭೂ ಒಕ್ಕೂಟವು ಸೈನ್ಯವಿಹೀನ (ಮಿಲಿಟರಿಯಲ್ಲದ) ಪ್ರಜಾಪ್ರಭುತ್ವವಾಗಿದ್ದು, ಭೂಮಿಯ ಜನರ ಪರಮೋಚ್ಚ ಸಾರ್ವಭೌಮತ್ವವನ್ನು ಹೊಂದಿದೆ.
• ರಾಷ್ಟ್ರೀಯ ಗಡಿಗಳನ್ನು ಮೀರಿದ ಸಮಸ್ಯೆಗಳಿಗೆ ಭೂ ಒಕ್ಕೂಟದ ಅಧಿಕಾರಗಳು ಅನ್ವಯಿಸುತ್ತವೆ.
• ವಿಶ್ವ ಚುನಾವಣೆಗಳು ಮತ್ತು ಆಡಳಿತಕ್ಕಾಗಿ, ಭೂಮಿಯು ಒಟ್ಟು 1000 ವಿಶ್ವ ಜಿಲ್ಲೆಗಳಾಗಿ, +/-10% ಜನಸಂಖ್ಯೆಗೆ ಸಮಾನ ಮಿತಿಗಳಲ್ಲಿ, 5 ಭೂಖಂಡದ ವಿಭಾಗಗಳಲ್ಲಿ 20 ವಿಶ್ವ ಪ್ರದೇಶಗಳ ಏಕೀಕರಣಗೊಂಡಿದೆ.

**3. ಭೂ ಒಕ್ಕೂಟದ ಅಂಗಗಳು:**

• ವಿಶ್ವ ಸಂಸತ್ತು(ರಾಜ್ಯಾಂಗ);
• ವಿಶ್ವ ಕಾರ್ಯಾಂಗ;
• ವಿಶ್ವ ಆಡಳಿತ;
• ಸಮಗ್ರ ಸಂಕಿರಣ (ಕಾಂಪ್ಲೆಕ್ಸ್);
• ವಿಶ್ವ ನ್ಯಾಯಾಂಗ; ಜಾರಿ ವ್ಯವಸ್ಥೆ; ಮತ್ತು ವಿಶ್ವ ಲೋಕಪಾಲ್ (ಒಂಬುಡ್ಸ್ಮನ್).

**4. ನಿರ್ದಿಷ್ಟ ಅಧಿಕಾರಗಳ ಅನುದಾನ:**

ವಿಶ್ವ ಕಾನೂನಿನ ಪರಿಣಾಮಕಾರಿ ಜಾರಿಯನ್ನು ಖಚಿತಪಡಿಸಿಕೊಳ್ಳಲು ವಿಶ್ವ ಶಾಸನ, ಆಡಳಿತ, ಶಿಕ್ಷಣ, ಹಣಕಾಸು, ನಾಗರಿಕ ಪೊಲೀಸ್ ಜಾರಿ ವ್ಯವಸ್ಥೆ, ವಿಶ್ವ ನ್ಯಾಯಾಲಯ ವ್ಯವಸ್ಥೆ ಮತ್ತು ಸಾರ್ವಜನಿಕ ರಕ್ಷಣೆಯನ್ನು ಬಳಸಿಕೊಳ್ಳುವ ಅಧಿಕಾರವನ್ನು ಭೂ ಸಂವಿಧಾನವು ನೀಡುತ್ತದೆ.

**5. ವಿಶ್ವ ಸಂಸತ್ತು:**

ಭೂಮಿಯ ಜನರು ವಿಶ್ವ ಶಾಸನಕ್ಕಾಗಿ ಉಪಕ್ರಮಗಳನ್ನು ಪ್ರಾರಂಭಿಸಬಹುದು ಮತ್ತು ವಿಶ್ವ ಸಂಸತ್ತಿನಿಂದ ಸಲ್ಲಿಸಲಾದ ಜನಾಭಿಪ್ರಾಯ ಸಂಗ್ರಹಣೆಯಲ್ಲಿ ಮತ ಚಲಾಯಿಸಬಹುದು. ವಿಶ್ವ ಸಂಸತ್ತು ವಿಶ್ವ ಶಾಸನವನ್ನು ಪರಿಗಣಿಸಲು, ಅಳವಡಿಸಿಕೊಳ್ಳಲು, ತಿದ್ದುಪಡಿ ಮಾಡಲು ಮತ್ತು ರದ್ದುಗೊಳಿಸಲು ಮೂರು ಶಾಸಕಾಂಗ ಸದನಗಳನ್ನು ಒಳಗೊಂಡಿದೆ.
• ಭೂಮಿಯ ಜನರು ನೇರವಾಗಿ ಜನರ ಸಭೆಯನ್ನು ಆಯ್ಕೆ ಮಾಡುತ್ತಾರೆ.
• ರಾಷ್ಟ್ರಗಳು ರಾಷ್ಟ್ರ ಸಭೆಯನ್ನು ನೇಮಿಸುತ್ತವೆ ಅಥವಾ ಆಯ್ಕೆ ಮಾಡುತ್ತವೆ.
• ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಕೌನ್ಸೆಲರ್ ಸಭೆಗೆ ಅಭ್ಯರ್ಥಿಗಳನ್ನು ನಾಮನಿರ್ದೇಶನ ಮಾಡುತ್ತಾರೆ.

**6. ವಿಶ್ವ ಕಾರ್ಯಾಂಗ :**

ವಿಶ್ವ ಸಂಸತ್ತು ವಿಶ್ವ ಕಾರ್ಯಾಂಗವನ್ನು ಆಯ್ಕೆ ಮಾಡುತ್ತದೆ ಮತ್ತು ಮೇಲ್ವಿಚಾರಣೆ ಮಾಡುತ್ತದೆ. ವಿಶ್ವ ಕಾರ್ಯಾಂಗವು ವಿಶ್ವ ಸಂಸತ್ತು ಅಥವಾ ವಿಶ್ವ ಸಂವಿಧಾನವನ್ನು ತಡೆ ಹಿಡಿಯಬಾರದು(ವೀಟೋ ಮಾಡಬಾರದು) ಅಥವಾ ಅಮಾನತುಗೊಳಿಸಬಾರದು. ವಿಶ್ವ ಕಾರ್ಯಾಂಗವು ಯಾವುದೇ ಮಿಲಿಟರಿ ಶಕ್ತಿಯನ್ನು ಹೊಂದಿಲ್ಲ.

**7. ವಿಶ್ವ ಆಡಳಿತ:**

30 ಕ್ಯಾಬಿನೆಟ್ ಮಂತ್ರಿಗಳು ಮತ್ತು ಉಪಾಧ್ಯಕ್ಷರು ಸುಮಾರು 30 ಸಚಿವಾಲಯಗಳ ವಿಶ್ವ ಆಡಳಿತದ ಮುಖ್ಯಸ್ಥರಾಗಿರುತ್ತಾರೆ. ಸಚಿವಾಲಯಗಳನ್ನು ಸಂಘಟಿಸಲು ಕ್ಯಾಬಿನೆಟ್ ಪ್ರಧಾನ ಕಾರ್ಯದರ್ಶಿಯನ್ನು ಆಯ್ಕೆ ಮಾಡುತ್ತದೆ.

**8. ಸಮಗ್ರ ಸಂಕಿರಣ (ಇಂಟಿಗ್ರೇಟಿವ್ ಕಾಂಪ್ಲೆಕ್ಸ್):**

ಪ್ರತಿಯೊಂದು ಸಚಿವಾಲಯದೊಳಗಿನ ಸ್ವಾಭಾವಿಕ ಸಾಮಾನ್ಯವೆನಿಸುವ (ನಕಲೆನಿಸುವ) ಕಾರ್ಯಗಳು ಇಂಟಿಗ್ರೇಟಿವ್ ಕಾಂಪ್ಲೆಕ್ಸ್‌ನ ಏಳು ಕ್ರಿಯಾತ್ಮಕ ಏಜೆನ್ಸಿಗಳಲ್ಲಿ ಸಂಯೋಜಿಸಲ್ಪಡುತ್ತವೆ.

**9. ವಿಶ್ವ ನ್ಯಾಯಾಂಗ:**

ವಿಶ್ವ ನ್ಯಾಯಾಂಗವು ಮಾನವ ಹಕ್ಕುಗಳು, ಕ್ರಿಮಿನಲ್ ಪ್ರಕರಣಗಳು, ನಾಗರಿಕ ಪ್ರಕರಣಗಳು, ಸಾಂವಿಧಾನಿಕ ಪ್ರಕರಣಗಳು, ಅಂತರರಾಷ್ಟ್ರೀಯ ಸಂಘರ್ಷಗಳು, ಸಾರ್ವಜನಿಕ ಪ್ರಕರಣಗಳು, ಮೇಲ್ಮನವಿ ಪೀಠ, ಸಲಹಾ ಪೀಠ ಮತ್ತು ಸುಪೀರಿಯರ್ ನ್ಯಾಯಮಂಡಳಿಗೆ ಸಂಬಂಧಿಸಿದ ಕಡ್ಡಾಯ ನ್ಯಾಯವ್ಯಾಪ್ತಿಯನ್ನುಹೊಂದಿರುವ ವಿಶ್ವ ಸರ್ವೋಚ್ಚ ನ್ಯಾಯಾಲಯ (ಸುಪ್ರೀಂ ಕೋರ್ಟ್), ಪ್ರಾದೇಶಿಕ ವಿಶ್ವ ನ್ಯಾಯಾಲಯಪೀಠಗಳು ಮತ್ತು ಜಿಲ್ಲಾ ವಿಶ್ವ ನ್ಯಾಯಾಲಯಗಳ ಪೀಠಗಳನ್ನು ಒಳಗೊಂಡಿದೆ.

**10. ಜಾರಿ ವ್ಯವಸ್ಥೆ:**

ವಿಶ್ವ ಸಂಸತ್ತು ನಾಗರಿಕ ಜಾರಿ ವ್ಯವಸ್ಥೆಯ

ಮುಖ್ಯಸ್ಥರಾಗಿ ವಿಶ್ವ ಅಟಾರ್ನಿ ಜನರಲ್ ಕಚೇರಿಯನ್ನು ಆಯ್ಕೆ ಮಾಡುತ್ತದೆ. ವಿಶ್ವ ಪೊಲೀಸರು ಶಂಕಿತ ಕಾನೂನು ಉಲ್ಲಂಘಿಸುವ ವ್ಯಕ್ತಿಗಳನ್ನು ಬಂಧಿಸುವ ಅಧಿಕಾರವನ್ನು ಹೊಂದಿರುತ್ತಾರೆ.ವಿಶ್ವಸಂಸತ್ತು ವಿಶ್ವಪೊಲೀಸರನ್ನು ನಿಯಂತ್ರಿಸುವುದಾಗಿದ್ದು, ಅದು ಶೋಧ ಮತ್ತು ಬಂಧನಗಳಿಗೆ ವಾರಂಟ್‌ಗಳನ್ನು ಪಡೆಯುವ ಸರಿಯಾದ ಪ್ರಕ್ರಿಯೆಯನ್ನು ಅನುಸರಿಸುತ್ತದೆ.

**12. ಹಕ್ಕುಗಳ ಮಸೂದೆ:**
ಹಕ್ಕುಗಳ ಮಸೂದೆಯು ನಾಗರಿಕ ರಾಷ್ಟ್ರಗಳು ವಾಡಿಕೆಯಂತೆ ಖಾತರಿಪಡಿಸುವ ಸಮಾನ ಹಕ್ಕುಗಳು, ಸಮಾನ ರಕ್ಷಣೆ, ಅಭಿವ್ಯಕ್ತಿ ಸ್ವಾತಂತ್ರ್ಯ, ಸಂಘ ಮತ್ತು ಧರ್ಮ, ಹೇಬಿಯಸ್ ಕಾರ್ಪಸ್ ಹಕ್ಕುಗಳು, ಸಾರ್ವತ್ರಿಕ ಮತದಾನದ ಹಕ್ಕು, ಆಸ್ತಿ, ಗೌಪ್ಯತೆ ಮತ್ತು ಸರ್ಕಾರದ ಹಸ್ತಕ್ಷೇಪಗಳ ವಿರುದ್ಧ ಇತರ ನಿಷೇಧಗಳು ಇವುಗಳಿಗೆ ಸಂಬಂಧಿಸಿದ ಎಲ್ಲಾ ಮಾನವ ಹಕ್ಕುಗಳ ರಕ್ಷಣೆಯನ್ನು ಖಾತರಿಪಡಿಸುತ್ತದೆ: .

**13. ನಿರ್ದೇಶನ ತತ್ವಗಳು:**
ನಿರ್ದೇಶನ ತತ್ವಗಳು ವಿಶ್ವದ ಎಲ್ಲ ಜನರಿಗೆ ಸಂಬಂಧಿಸಿದ ಹೆಚ್ಚುವರಿ ನಾಗರಿಕ ಹಕ್ಕುಗಳು ಮತ್ತು ಪ್ರಯೋಜನಗಳನ್ನು ಪಟ್ಟಿ ಮಾಡುತ್ತವೆ.

**14. ಸುರಕ್ಷತೆಗಳು ಮತ್ತು ಮೀಸಲಾತಿಗಳು:**
14.1. ಸದಸ್ಯ ರಾಷ್ಟ್ರಗಳ ಸಾರ್ವಜನಿಕ ಕಾಯಿದೆಗಳು, ದಾಖಲೆಗಳು, ಶಾಸನ, ನ್ಯಾಯಾಂಗ ಪ್ರಕ್ರಿಯೆಗಳು ಮತ್ತು ಇತರ ಆಂತರಿಕ ವ್ಯವಹಾರಗಳಿಗೆ ಭೂ ಒಕ್ಕೂಟವು ಸಂಪೂರ್ಣ ನಂಬಿಕೆ ಮತ್ತು ಮನ್ನಣೆಯನ್ನು ಖಾತರಿಪಡಿಸುತ್ತದೆ;
14.2. ಸದಸ್ಯ ರಾಷ್ಟ್ರಗಳು ಮತ್ತು ಭೂಮಿಯ ಜನರು ನಿಯೋಜಿತವಲ್ಲದ ಅಧಿಕಾರಗಳನ್ನು ಕಾಯ್ದಿರಿಸಿದ್ದಾರೆ.

**15. ವಿಶ್ವ ಫೆಡರಲ್ ವಲಯಗಳು ಮತ್ತು ವಿಶ್ವ ರಾಜಧಾನಿಗಳು:**
ವಿಶ್ವ ಸಂಸತ್ತು 5 ಭೂಖಂಡದ ವಿಭಾಗಗಳಲ್ಲಿ ವಿಶ್ವ ರಾಜಧಾನಿಗಳನ್ನು ಸ್ಥಾಪಿಸುತ್ತದೆ. ವಿಶ್ವ ಸಂಸತ್ತು 20 ವಿಶ್ವ ಪ್ರದೇಶಗಳಲ್ಲಿ 20 ವಿಶ್ವ ಫೆಡರಲ್ ವಲಯಗಳನ್ನು ಸ್ಥಾಪಿಸುತ್ತದೆ.

**16. ವಿಶ್ವ ಪ್ರದೇಶಗಳು ಮತ್ತು ಬಾಹ್ಯ ಸಂಬಂಧಗಳು:**
16.1. ಭೂಮಿಯ ಜನರು ಮಾಲೀಕತ್ವವನ್ನು ಹೊಂದಿದ್ದಾರೆ ಮತ್ತು ಭೂ ಒಕ್ಕೂಟವು ಸಾಗರಗಳು, ಸಮುದ್ರ ತಳಗಳು, ಪ್ರಮುಖ ಜಲಸಂಧಿಗಳು, ಚಂದ್ರ ಮತ್ತು ವಾತಾವರಣದ ನ್ಯಾಯವ್ಯಾಪ್ತಿಯನ್ನು ಹೊಂದಿದೆ.
16.2. ಭೂ ಒಕ್ಕೂಟವು ಶಾಂತಿಯುತ ಬಾಹ್ಯ ಸಂಬಂಧಗಳನ್ನು ಸ್ಥಾಪಿಸುತ್ತದೆ. ಪ್ರೆಸಿಡಿಯಂ ಬಾಹ್ಯ ಸಂಬಂಧಗಳು ಮತ್ತು ಒಪ್ಪಂದಗಳನ್ನು ಮಾತುಕತೆ ಮಾಡುತ್ತದೆ, ಇದು ವಿಶ್ವ ಸಂಸತ್ತಿನ ಅನುಮೋದನೆಗೆ ಒಳಪಟ್ಟಿರುತ್ತದೆ.

**17. ಅನುಮೋದನೆ ಮತ್ತು ಅನುಷ್ಠಾನ:**
ಭೂಮಿಯ ಸಂವಿಧಾನವು ಹಂತಗಳ ಮೂಲಕ ಜಾರಿಗೆ ತರುತ್ತದೆ:
•ತಾತ್ಕಾಲಿಕ ಭೂ ಒಕ್ಕೂಟ: 25 ದೇಶಗಳು ಅಥವಾ ವಿಶ್ವ ಜನಸಂಖ್ಯೆಯ 10% ಸೇರಿದಂತೆ ವಿಶ್ವ ಜಿಲ್ಲೆಗಳು ಅಂಗೀಕರಿಸುವ ಮೊದಲು.
•ಮೊದಲ ಕಾರ್ಯಾಚರಣಾ ಹಂತ: 25 ದೇಶಗಳು ಅಥವಾ ವಿಶ್ವ ಜನಸಂಖ್ಯೆಯ 10% ಸೇರಿದಂತೆ ಅಥವಾ ಸಮಾನ ಮಿಶ್ರಣ ವಿಶ್ವ ಜಿಲ್ಲೆಗಳು ಅಂಗೀಕರಿಸಿದಾಗ.
•ಎರಡನೇ ಕಾರ್ಯಾಚರಣಾ ಹಂತ, 50% ದೇಶಗಳು ಮತ್ತು ವಿಶ್ವ ಜನಸಂಖ್ಯೆಯ 50% ಸೇರಿದಂತೆ ಅಥವಾ ಸಮಾನ ಮಿಶ್ರಣ ವಿಶ್ವ ಜಿಲ್ಲೆಗಳು ಅಂಗೀಕರಿಸಿದಾಗ.
•ಪೂರ್ಣ ಕಾರ್ಯಾಚರಣಾ ಹಂತ, 90% ಸೇರಿದಂತೆ ವಿಶ್ವ ಜನಸಂಖ್ಯೆಯ 80% ದೇಶಗಳು ಅಂಗೀಕರಿಸಿದಾಗ.

**18. ತಿದ್ದುಪಡಿಗಳು:**
ಜನರು ಭೂಮಿಯ ಸಂವಿಧಾನಕ್ಕೆ ತಿದ್ದುಪಡಿ ಕಾರ್ಯವಿಧಾನಗಳನ್ನು ಪ್ರಾರಂಭಿಸಬಹುದು. ವಿಶ್ವ ಸಾಂವಿಧಾನಿಕ ಸಮಾವೇಶವು ಕನಿಷ್ಠ 20 ವರ್ಷಗಳಿಗೊಮ್ಮೆ ಸಭೆ ಸೇರುತ್ತದೆ.

**19. ತಾತ್ಕಾಲಿಕ ವಿಶ್ವ ಸರ್ಕಾರ:**
ತಾತ್ಕಾಲಿಕ ವಿಶ್ವ ಸಂಸತ್ತು ಮೊದಲ ಕಾರ್ಯಾಚರಣಾ ಹಂತಕ್ಕೆ ಮುಂಚಿತವಾಗಿ ವಿಶ್ವ ಶಾಸನವನ್ನು ಅಳವಡಿಸಿಕೊಳ್ಳಬಹುದು, ಇದು ವಿಶ್ವ ಸಂಸತ್ತಿನ ಮರು ದೃಢೀಕರಣಕ್ಕೆ ಒಳಪಟ್ಟಿರುತ್ತದೆ. ವಿಶ್ವಸಂಸ್ಥೆಯ ಸಂಸ್ಥೆಯ ಕಾರ್ಯಸಾಧ್ಯವಾದ ಸಂಸ್ಥೆಗಳು ಭೂ ಒಕ್ಕೂಟಕ್ಕೆ ಸಂಯೋಜನೆಗೊಳ್ಳುತ್ತವೆ.

**********

1968, 1977, 1979 ಮತ್ತು 1991 ರಲ್ಲಿ ವಿಶ್ವದಾದ್ಯಂತ ನಡೆದ ವಿಶ್ವ ಸಂವಿಧಾನ ಸಭೆಯ 4 ಅಧಿವೇಶನಗಳಲ್ಲಿ ಭೂಮಿಯ ಒಕ್ಕೂಟದ ಸಂವಿಧಾನವನ್ನು ಅಭಿವೃದ್ಧಿಪಡಿಸಲಾಯಿತು ಮತ್ತು ಅಂಗೀಕರಿಸಲಾಯಿತು. ಇದನ್ನು https://earthconstitution.world/text-of-the-earth-constitution/ ನಲ್ಲಿ ಪೂರ್ಣವಾಗಿ ಕಾಣಬಹುದು.



"ವಿಶ್ವ ಸರ್ಕಾರ ಬರಲೇಬೇಕು ಮತ್ತು ಬರುತ್ತದೆ ಎಂಬುದರಲ್ಲಿ ನನ್ನ ಮನಸ್ಸಿನಲ್ಲಿ ಯಾವುದೇ ಸಂದೇಹವಿಲ್ಲ, ಏಕೆಂದರೆ ವಿಶ್ವದ ಅನಾರೋಗ್ಯಕ್ಕೆ ಬೇರೆ ಯಾವುದೇ ಪರಿಹಾರವಿಲ್ಲ. ಇದು ಒಕ್ಕೂಟ (ಫೆಡರಲ್) ತತ್ವದ ವಿಸ್ತರಣೆಯಾಗಿರಬಹುದು, ವಿಶ್ವಸಂಸ್ಥೆಯ ಆಧಾರವಾಗಿರುವ ಕಲ್ಪನೆಯ ಬೆಳವಣಿಗೆಯಾಗಬಹುದು, ಪ್ರತಿ ರಾಷ್ಟ್ರೀಯ ಘಟಕವು ಅದರ ಪ್ರತಿಭೆಗೆ ಅನುಗುಣವಾಗಿ ತನ್ನ ಭವಿಷ್ಯವನ್ನು ರೂಪಿಸಿಕೊಳ್ಳಲು ಸ್ವಾತಂತ್ರ್ಯವನ್ನು ನೀಡುತ್ತದೆಯಾದರೂ, ಸದಾ ವಿಶ್ವ ಸರ್ಕಾರದ ಮೂಲ ಒಡಂಬಡಿಕೆಗೆ ಒಳಪಟ್ಟಿರುತ್ತದೆ."

ಪಂಡಿತ್ ಜವಾಹರಲಾಲ್ ನೆಹರು
ಭಾರತದ ಪ್ರಥಮ ಪ್ರಧಾನಮಂತ್ರಿ